206-320
T:R-2

(1)

51st Year of Publication ★ SATYAVADI Daily, MYSORE 4

Reg No B G 155

21 - 6 - 1968

ಪ್ರಮುಖ ಪರ್ವಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯೆಚ್ಚು ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6



A Straight Deal
If you want a Straight Deal
Then go Straight to
Bank Road Bahusar.
The Shop with one Price,
a Fair Price, and a really
favourable price..
No worry. No Higgle-haggling.

ಸ್ಥಾಪಕರು : ತರುಣ ಭಕ್ತಿವರ್ಧಕ ಎಂ. ಎ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಭಾರತವು ಪರಮಾಣು ಮಾರ್ಗ ಹಿಡಿದೀತು

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಜುಲೈನಲ್ಲಿ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಪನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಪ್ರಭಾಭೂಷಣ ಶ್ರೀ ಎಫ್. ಕೆ ಜಿಜಾನಿಯವರು, ಶ್ರೀ ಮಾಧವ್ ಶೆನ್ಯಾ ಯವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ. ಮೋದಿಯವರು ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತಿಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಅದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇನೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಮುಷ್ಕರ

ಮದರಾಸು— ರೂ. 75 ಕೋಟಿಯ ಕೈಗಾರಿಕಾ ಎಸ್ಟೇಟಿನಲ್ಲಿಯ ಕೆಲವು ಕಾರ್ಖಾನೆ ಮತ್ತು ಇತರ ಸಂಸ್ಥೆಗಳು ಕಾರ್ಮಿಕರ ಮುಷ್ಕರಕ್ಕೆ ತುತ್ತಾಗಿವೆ.

ಕಂಪ್ಯೂಟರು ಸಾನುಸ್ಯ

ನವದೆಹಲಿ— ರಷ್ಯಾದ ದೂರಪ್ರಾಚ್ಯ ಸೈಬೀರಿಯಾದಲ್ಲಿ ಚಿನ್ನ ಮತ್ತಿತರ ಲೋಹಗಳಿರುವುದನ್ನು ಎಲೆಕ್ಟ್ರಾನ್ ಕಂಪ್ಯೂಟರು ಪತ್ತೆಮಾಡಿದೆ.

ಕಾಗದ ತಲುಪಲು 64 ವರ್ಷಗಳು

ಬೆಳಗಾಂ— ಪೂನಾ ಹತ್ತಿರ ಯರವಾಡ ಪೋಸ್ಟಾಫೀಸಿನಲ್ಲಿ 1904 ಜೂನ್ 28 ರಂದು ಶ್ರೀ ಎಸ್. ಸಾಥೆಯವರು ಬೆಳಗಾವಿನಲ್ಲಿರುವ ಅವರ ಸಹೋದರನಿಗೆ ಹಾಕಿದ್ದ ಕಾರ್ಡು ಈ ತಿಂಗಳು 4 ರಂದು ತಲುಪಿತು– 64 ವರ್ಷಗಳ ನಂತರ !

★

ರೈಲು ಅಪಘಾತ

ಕಲ್ಕತ್ತಾ— ಏನ್ಶಕ್ಕಾರ್ ಹತ್ತಿರ ಎರಡು ರೈಲು ತಗುಲಿ, ಇಬ್ಬರುರು ಸತ್ತು ಹಲವರು ಗಾಯಗೊಂಡರು.

★

ಡಾ|| ಮೋದಿಯವರ ಉಚಿತ ನೇತ್ರ ಶಿಬಿರ

ಕೋಲಾರ— ಜೂನ್ ತಿಂಗಳಲ್ಲಿ ನಡೆದ ಶಿಬಿರದಲ್ಲಿ ವಿವಿಧ ರೀತಿಯ ಒಟ್ಟು 323 ಆಪರೇಷನ್‌ಗಳು ನಡೆದವು – ಒಟ್ಟು ಪರ್ಯಾಲೋಚನೆಗಳು 4758 ; ಉಚಿತ ಔಷಧಿ ಕೊಟ್ಟದ್ದು 478 ; ಉಚಿತ ಭೋಜನ 12134.

ಡಾ|| ಮೋದಿಯವರಿಗೆ ಸನ್ಮಾನ

ಮೈಸೂರು— ನಿನ್ನೆ ಸಂಜೆ ಪುರಸಭೆಯವರು ಪದ್ಮಭೂಷಣ ಡಾ || ಮೋದಿಯವರಿಗೆ ಪೌರಸನ್ಮಾನವನ್ನರ್ಪಿಸುವ ಸಮಾರಂಭವನ್ನು ಏರ್ಪಡಿಸಿದ್ದರು. ಮಾನವ ಕಲ್ಯಾಣಕ್ಕಾಗಿ ಅವರು ಪಡುತ್ತಿರುವ ಶ್ರಮ ಮತ್ತು ಮಾಡುತ್ತಿರುವ ಸೇವೆ ಮುಕ್ತಕಂಠದಿಂದ ಪ್ರಶಂಸಿಸಲಾಯಿತು – ಡಾಕ್ಟರವರು ಸೂಕ್ತ ಉತ್ತರವಿತ್ತು ವಂದಿಸಿದರು. ಪೌರಪಭಾಧ್ಯಕ್ಷ ಶ್ರೀ ಬಿ. ಸಿ. ಲಿಂಗಯ್ಯನವರು ಬಿನ್ನವತ್ತಳಿ ಅರ್ಪಿಸಿದರು. ಡಾಕ್ಟರರವರಿಗೆ ಶ್ರೀಗಂಧದ ಕರಂಡವು ಕೊಡಲಾಯಿತು.

★

ಪಿತೂರಿ ಅಪಾದನೆ

ಡಾಕಾ— ಭಾರತ ಮದ್ದೂಗುಂಡು, ಆಯುಧ ಮತ್ತು ಹಣದ ನೆರವಿನಿಂದ ಪೂರ್ವ ಪಾಕಿಸ್ತಾನವು ಬೇರ್ಗೊಂಡು ಭಾರತದ ಮನ್ನಣೆಯ ಸ್ವಾತಂತ್ರ್ಯ ಸ್ಥಾಪಿಸುವ ಪಿತೂರಿ ಅಪಾದನೆಗಾಗಿ ವಿರೋಧ ನಾಯಕ ಷೇಕ್ ಮಾಜಿಬಾರ್ ರಹಮಾನ್ ಮತ್ತು 34 ಪೂರ್ವ ಪಾಕಿಸ್ತಾನಿಗಳ ವಿಚಾರಣೆ ಪ್ರಾರಂಭವಾಗಿದೆ.

ಪರಮಾಣು ಮಾರ್ಗ

ವಿಶ್ವಸಂಸ್ಥೆ— ಪರಮಾಣು ಸಂಬಂಧದ ಒಪ್ಪಂದಕ್ಕೆ ಕುಜುಮಾಡುವ ಮತ್ತು ಭಾರತವೂ ಸೇರಿ ಮಾಡಿರುವ ದೇಶಗಳಿಗೆ ದೊಡ್ಡ ಶಕ್ತಿಗಳು ರಕ್ಷಣೆ ಭರವಸೆ ನೀಡದಿದ್ದರೆ, ಭಾರತವೂ ಪರಮಾಣು ಮಾರ್ಗ ಹಿಡಿಯಬೇಕಾದೀತೆಂದು ರಕ್ಷಣಾ ಸಮಿತಿಯಲ್ಲಿ ಭಾರತದ ಹೆಳಿಕೆ ವ್ಯಕ್ತಪಡಿಸುತ್ತದೆ.

ಮಾರ್ಷಲ್ ಲಾ

ಮಾಸ್ಕೋ— ಟಿಬೆಟ್ಟಿನ ರಾಜಧಾನಿ ಲಾಸ್ಸಾದಲ್ಲಿ ಈಚೆಗಾದ ಸಶಸ್ತ್ರ ಘರ್ಷಣೆಗಳಿಗಾಗಿ ಮಾರ್ಷಲ್ ಲಾ ಜಾರಿಮಾಡಲಾಗಿದೆ – ಚೀನಾದ ಅನೇಕ ಕಡೆ ಹೊಡೆದಾಟಗಳಾಗಿ 100 ಕುಂದಿ ಸತ್ತರೆಂದೂ, ಸಯಾಟ್ಸೆ ವಿಶ್ವವಿದ್ಯಾಲಯದ ಹತ್ತೋಟೆ ಬಗ್ಗೆ ನಡೆದ ಘರ್ಷಣೆಯಲ್ಲಿ 47 ಮಂದಿ ಸತ್ತರೆಂಬೂ ವರದಿಯಾಗಿದೆ.

●

ಹೆಂಡದಂಗಡಿ

ಮೈಸೂರು— ಮೈಸೂರು ಕೆ ಆರ್ ಮೊಹಲ್ಲಾ ವಿಜಿಲೆನ್ಸು ಸನ್ನಿತಿಯವರು ಪೋಲೀಸು ಸೂಪರಿಂಟೆಂಡೆಂಟರನ್ನು ಕಂಡು, ಸಂಜು ಮಳಿಗೆ ಹತ್ತಿರವಿರುವ ಹೆಂಡದಂಗಡಿಯಿಂದ ಜನರಿಗೆ ತುಂಬಾ ತೊಂದರೆಯಾಗಿರುವುದೆಂದೂ, ಅದನ್ನು ಅಲ್ಲಿಂದ ತೆಗೆಸಬೇಕೆಂದೂ ವಿನಂತಿಸಿದರು.

★

ಲೆವಿ

ಮುಂಗಳಪರು— ಲೆವಿಶೇಖರಣೆಯ ಜನವಿರೋಧವಾಗಿದ್ದು, ಯಾರಿಗೂ ಆದಾಯ ಬೇಕಾಗಿಲ್ಲವೆಂದೂ, ಈ ಬಗ್ಗೆ ಪುನರ್ವಿಚಾರಣೆ ಅಗತ್ಯವೆಂದೂ ರಾಜ್ಯದ ಆಹಾರ ಮಂತ್ರಿಗಳು ಹೇಳಿದರು.



— — ವ್ಯವಸಾಯ ಚಿತ್ರ — —

ಭಕ್ತ ತುಳಸೀದಾಸ

(ಮುಂದುವರಿದುದು)

" ಅದು ನನಗೆ ಸಾಧ್ಯವಿಲ್ಲ ; ಆದರೆ ನಾನು ಯಾರ ಹೆಸರನ್ನು ಉಚ್ಚರಿಸುವುದಕ್ಕೂ ಇಲ್ಲವೋ, ಆ ಭಗವಂತನನ್ನು ನೀನು ಹೇಗೆ ಕಾಣಬಲ್ಲೆ ಎಂಬುದನ್ನು ತಿಳಿಸಬಲ್ಲೆ. ಕಾಶಿಯಲ್ಲಿನ ಅಶ್ವಮೇಧಘಾಟಿಗೆ ಹೋಗು. ಅಲ್ಲಿ ಶ್ರೀ ರಾಮಚಂದ್ರನ ಕಥೆಯು ನಿತ್ಯವೂ ಹೇಳಲ್ಪಡುತ್ತಿರುವುದು. ಅಲ್ಲಿ ಕುಷ್ಠರೋಗದಿಂದ ದೇಹವು ಒಡೆದಿರುವ, ಆ ಭಗವಂತನ ಅಚ್ಚುಮೆಚ್ಚಿನ ಹನುಮಂತನನ್ನು ನೀನು ಕಾಣಬಲ್ಲೆ. ಅವನನ್ನು ಗಮನಿಸು ; ಅವನು ಅಲ್ಲಿಗೆ ಬರುವವರಲ್ಲಿ ಮೊದಲನೆಯವನು. ಹೋಗಿ ಪುದರಲ್ಲಿ ಕಡೆಯವನು. ಅವನ ಪವಿತ್ರ ಪಾದಗಳನ್ನು ಬಲವಾಗಿ ಹಿಡಿ ; ನಿನ್ನನ್ನು ಹೊರದೂಡಲು ಅವನು ಮಾಡುವ ಪ್ರಯತ್ನಗಳನ್ನು ಲಕ್ಷಿಸಬೇಡ : ಮಿಕ್ಕಿದ್ದನ್ನು ಅವನೇ ಮಾಡುತ್ತಾನೆ." ಎಂದು ತಿಳಿಸಿ, ಭೂತವು ಅದೃಶ್ಯವಾಯಿತು.

ತನ್ನ ಸ್ವಾಮಿಯನ್ನು ಕಾಣುವ ಆಶಾಭಾವನೆಯಿಂದಲೂ, ಭೀಕರವಾಗಿ ಹೊಡೆದುಕೊಳ್ಳುವ ಹೃದಯದಿಂದಲೂ, ಹೊಸ ನಿರೀಕ್ಷೆ ಮತ್ತು ಭಯದ ಧನುಸ್ಸಿನಿಂದಲೂ, ತುಳಸೀದಾಸನು ಕಾಶಿಯಲ್ಲಿನ ಅಶ್ವಮೇಧಘಾಟಿಗೆ ಕೂಡಲೇ ಹೋದನು. ಅಲ್ಲಿ ಬಹಳ ಮಂದಿ ಸೇರಿದ್ದ ಸಭೆಯಲ್ಲಿ ರಾಮಾಯಣ ಕಥೆಯ ಪಠಣವಾಗುತ್ತಿತ್ತು.

(ಮುಂದುವರಿಯುವುದು)

SHAKTI

SUDHA

A Superb Tonic



ಗೋಹತ್ಯೆಯನ್ನು ಮತ್ತು ಪಾಶ್ಚಿಮಾತ್ಯರು ಕಾಯ್ದೆಗಳು ಹೆಚ್ಚೆಚ್ಚಾಗಿ ನಡೆಯಲಿ

Cow Slaughter should be banned Immediately

ಪುಡ್‌ಲಾಂಡ್ಸ್ ದಿಗ್ವಿಜಯ 8 ನೇ ವಾರ

50TH GALA DAY

50 ನೇ ಆನಂದದ ದಿನ

ಷಾಗಿರ್ದ್ Shagird

ಆಪೆರ— 21—6—68 ರಿಂದ

ಪವಿತ್ರ ಪಿಕ್ಚರ್ಸ್‌ರವರ

ಅನುಬಂಧ [ತಮಿಳು]

ಪಾತ್ರ— ಜೈಶಂಕರ್, ಎಲ್. ವಿಜಯಲಕ್ಷ್ಮಿ, ನಾಗೇಶ್

Help The Gorakshana

ಗೋರಕ್ಷಣಕ್ಕೆ ಬೆಂಬಲ ನೀಡಿ

— ಗೋರಕ್ಷಣೆ ನ್ಯಾಯಶಾಸ್ತ್ರಬದ್ಧವಾದ ವಿಷಯ —

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ

ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾರಾಯಿಡೆ ಕಳೆದಿರುವವರು ಇವಂಕ್ಷಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ್ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು

ಶ್ರೀ ಅನಂತನಂಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ ಹೊಂಗನೂರು

ಗೋರಕ್ಷಣ ಆಫೀಸು ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು

ವಿಳಾಸ — ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4